# ಧರಿನಾಡಿನ ಮಾತು-ಕತಿ

**ಈ ವಾರ ಕರ್ನಾಟಕದ ಮುಕುಟದಂತಿರುವ ಬೀದರ್ ಜಿಲ್ಲೆಯ ಆಡುಮಾತಿನ ಮಂಟಪ ಇಲ್ಲಿದೆ. ಅನುಭವ ಮಂಟಪದ ಧರಿನಾಡು ಎಂದು ಕರೆಯುವ ಬೀದರ್‌ನ ಬಿದರಿ ಮಾತಿನಲ್ಲಿ ತೆಲುಗು, ಮರಾಠಿ, ಹಿಂದಿ, ಉರ್ದು, ಫಾರ್ಸಿ ಪದಗಳ ಬಳಕೆ ಹೇರಳವಾಗಿದೆ. ಮಾತಾಡುವ ಧಾಟಿಯೂ ಎಳೆದೆಳೆದು ಮಾತಾಡುತ್ತಾರೆ. ಮಾವಿನ ತೋಪಿಗೆ ಆಮ್‌ರಾಯಿ ಎನ್ನುವ ಪದ 'ಆಂಬ್ರ್ಯಾ' ಎನ್ನುತ್ತಾರೆ. ಇಂಥ ಹಲವಾರು ಪದಗಳು ಈ ಲೇಖನದಲ್ಲಿವೆ. ಭಾಷಾಕೋಸಂಬರಿಯಂತೆನಿಸುವ ಈ ಸರಣಿಯಲ್ಲಿ ಬೀದರಿನ ಭಾಷೆಯನ್ನು ಲೇಖಕಿ ಬಿ.ಜೆ. ಪಾರ್ವತಿ ವಿ. ಸೋನಾರೆ ಹಂಚಿಕೊಂಡಿದ್ದಾರೆ. ಓದುವ ಮತ್ತು ಕೇಳುವ ಆನಂದಕ್ಕೆ.**

ಟ್ರೀಣ್ ಟ್ರೀಣ್...

'ಏ ಎವ್ವಾ... ನಡು ಮಧ್ಯಾನ್ನಾಗ ನಿದ್ದೀಬಿ ಮಾಡ್ಲಾಕ್ ಬಿಡಲುವು. ಈಗರ ಥೋಡೆ ಕಣ್ ಮುಚಲತೀವು. ಇಂಥ ಬಿಸ್ಲಾಗ ಯಾರಿಗೇನ್ ಕಮ್ ಬಿತ್ತೋ ಏನೋ...' ಅಂತ ಅನ್ಕೋತಾ ಎದ್ದು ಫೋನ್ ಎತ್ತಿ 'ಹಲೋ' ಅಂದ.

ಅಕಾಡಿಂದು 'ಖೂನಾ ಹಿಡ್ದಿ ಏನ್ಗಾ?' ಅಂತ ಹಳೇ ಪೈಚಾನ್ ಇದ್ದಪ್ಲೆ ಕೇಳ್ದುಳು.

ನಾ ನಿದ್ದಿಗಣ್ಣಾಗ ಇದ್ದಾ. 'ಇಕಿ ಯಾವಾಕಿ ಹಳಾ?' ಅಂತ ಮನಸಿನಾಗ ಬೈಕೋತಾ; 'ಇಲ್ಲೆವ್ವಾ. ಯಾರು? ಗೊತ್ತಾಗಲೊಂಟುದ...' ಅಂತಂದ.

'ನೋಡ್. ಧನಿ ನೆಪ್ ಮಾಡ್ಕೋ ಥೇಪಿ. ಬಾರಾ ವರ್ಷ್ ಒಂದೇ ಗಲ್ಯಾಗಿದ್ದೇವು' ಅಂತ ಅಂತೀಕಿ ತಡಾ ನನ್ ನಿದ್ದಿನೇ ಹಾರಿ ಹೊಯ್ತು.

'ಹೇ! ಸುನಿ ಹ್ಯಾಂಗಿದ್ದಿಗಾ...? ಏಸ್ ವರ್ಷ ಆದುವು ಭೇಟಿನೇ ಇಲ್ಲ. ನಂದ್ ನಂಬರ್ ಯಾರ್ ಕೊಟ್ಟೂರು ನಿಂಗಾ?' ಅಂತಾ ಉಸುರು ಬಿಡಲ್ದಪ್ಲೇ ಕೇಳ್ದ.

ನಮ್ಮಿಬ್ಬರ ಮನಿಗೋಳು ಆಜು ಬಾಜುನೇ ಇದ್ದೀವ್. ಪಕ್ಕಾ ದೋಸ್ತೇರಿದ್ದೇವು. ಚೌದಾ ಪಂದ್ರಾ ವರುಷ್ ಆಗಿರ್ ಬೇಕ್ ಭೇಟಿ ಆಗಿ.

ನಾವು ಸಣ್ಣೌರಿದ್ದಾಗ ನಮ್ಮೂರಾಗ ಜೋಕಮಾರ ಬರ್ತೀನು ಆ ಜೋಕ್ಯಾನ ಹಿಂದಿಂದ್ ಓಡಾಡ್ತೀದೇವು. ಅವರು ಬೈನ್ ತಪ್ಪುಲಿಗಿ ಹಚ್ಚಿ ಕೊಟ್ಟ ಕಾಡಗಿ; ಕಣ್ಣೀಗಿ ಹಚ್ಕೊಂಡು; ಅವುರ್ ಹಾಡಾ; ಹಾಡಾ ನಾವ್ ಬಿ ಹಾಡ್ತೀದೇವು. ಆ ಹಾಡಿಂದ ಎಡ್ ನುಡಿ ಇಗೋತೀಗಿಬಿ ನೆನಪವ ನಂಗ.



ಬೀದರಿನ ಚೌಬಾರಾ: ಎರಡು ಪಾಳಿಗಳಲ್ಲಿ ನಾಲ್ಕು ದಿಕ್ಕು, ಹನ್ನೆರಡು ಗಂಟೆ ಪಹರೆ ಮಾಡುತ್ತಿದ್ದ ಸ್ಮಾರಕ